
PEER REVIEWED

# STUDIES IN KARNATAKA HISTORY AND CULTURE

Editors

Prof.R.M.Shadakshariah

Prof.Iranna Pattar



VOLUME- XIX-RESEARCH ARTICALS PRESENTED IN THE 30th SESSION OF THE KARNATAKA HISTORY CONGRESS HELD AT KARNATAK UNIVERSITY, DHARWAD

Scanned with OKEN Scanner

# ದೇವಗಿರಿಯ ಯಾದವರ ಕಾಲದ ಶಾಸನಗಳಲ್ಲಿ ಶೈವಪ್ರಬೇಧಗಳು : ಒಂದು ಅವಲೋಕನ

**ಎಸ್. ಆರ್. ನಾಗಣ್ಣವರ**

ಸಹಾಯಕ ಪ್ರಾಧ್ಯಾಪಕರು, ವಿ.ಎಂ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ.

ದೇವಗಿರಿಯ ಯಾದವರು ಅಥವಾ ಸೇವುಣರು ದಕ್ಷಿಣ ಭಾರತದ ಇತಿಹಾಸದಲ್ಲಿ ಆಳಿಹೋದ ಪ್ರಮುಖ ಅರಸು ಮನೆತನವಾಗಿದೆ. ಈ ಮನೆತನದ ಅರಸರು ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹುಭಾಗವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು **ಕ್ರಿ.ಶ. 850 ರಿಂದ ಕ್ರಿ.ಶ. 1334 ರವರೆಗೆ** ಆಳ್ವಿಕೆ ನಡೆಸಿದ್ದರು. ಈ ಮನೆತನದ ಮೊದಲ ದೊರೆ ಸೇವುಣ ಚಂದ್ರದೇವನೆಂದು ಸಂಗಮನೇರ್ ಶಾಸನದ ಮೂಲಕ ತಿಳಿಯಬಹುದಾಗಿದೆ. (ಎ. ವಿ. **ನರಸಿಂಹಾಚಾರ್ಯ : ಕರ್ನಾಟಕದ ಸೇವುಣರ ಇತಿಹಾಸ, ಪುಟ-43**) ನಂತರ ಧಡಿಯಪ್ಪ, ಒಂದನೆಯ ಬಿಲ್ಲಮ, ರಾಜಗಿ, ವಡ್ಡಿಗ, ಎರಡನೆಯ ಧಡಿಯಪ್ಪ, ಎರಡನೆಯ ಬಿಲ್ಲಮ, ಒಂದನೆಯ ವೇಸುಗಿ, ಅರ್ಜುನ, ಮೂರನೆಯ ಬಿಲ್ಲಮ, ನಾಲ್ಕನೆಯ ಬಿಲ್ಲಮ, ಮಲ್ಲುಗಿ ಕೃಷ್ಣ, ಮಹಾದೇವ ಮತ್ತು ರಾಮಚಂದ್ರದೇವ ಮುಂತಾದ ಅರಸರು ಆಳ್ವಿಕೆ ಮಾಡಿದ್ದರು. ರಾಮಚಂದ್ರದೇವನ ಕಾಲಕ್ಕೆ ದೇವಗಿರಿಯು ಮಲ್ಲಿಕಾಫರ್ ಮತ್ತು ಮಹಮ್ಮದ ಬೀನ್ ತುಘಲಕ್‌ನ ದಾಳಿಗೆ ಸಿಲುಕಿದುದರ ಫಲವಾಗಿ ಯಾದವರು ಕ್ರಿ.ಶ. 1334 ರಲ್ಲಿ ರಾಜಕೀಯ ರಂಗದಿಂದ ದೂರವಾದರು. ಸೇವುಣ ಅರಸರೂ ಸಹ ಶೈವಧರ್ಮದ ಬೆಳವಣಿಗೆಗಾಗಿ ಶೈವ ದೇವಾಲಯಗಳನ್ನು ನಿರ್ಮಿಸುವುದಲ್ಲದೆ ದೇವಾಲಯಗಳಿಗೆ, ಮುನಿಗಳಿಗೆ ದಾನ-ದತ್ತಿಗಳನ್ನು ನೀಡುವುದರ ಮೂಲಕ ಪೋಷಿಸುತ್ತಿದ್ದರು.

**ದೇವಗಿರಿಯ ಸೇವುಣರ ಕಾಲದ ಶೈವ ಶಾಸನಗಳ ಜಿಲ್ಲಾವಾರು ಪಟ್ಟಿ**

| ಅರಸ | ವಿಜಯಪುರ | ಬಾಗಲಕೋಟ | ಯಾದಗಿರಿ | ಹಾವೇರಿ | ಶಿವಮೊಗ್ಗ | ಗದಗ | ರಾಯಚೂರ | ಬೆಳಗಾವಿ | ಧಾರವಾಡ | ಕೊಪ್ಪಳ | ಬಳ್ಳಾರಿ | ಕಲಬುರ್ಗಿ | ಒಟ್ಟು |
|---|---|---|---|---|---|---|---|---|---|---|---|---|---|
| ಭಿಲ್ಲಮದೇವ | 11 | | | | | | | | | | | | 11 |
| ಸಿಂಘಣದೇವ | 23 | 9 | 9 | 18 | 8 | 17 | 4 | 3 | 2 | 3 | | 1 | 97 |
| ಚೇತುಗಿದೇವ | 6 | | | | | | | | | | | | 6 |
| ರಾಮಚಂದ್ರದೇವ | 2 | 2 | | 10 | 9 | 3 | | 1 | 1 | | 4 | 4 | 36 |
| ಕನ್ನರದೇವ | 7 | | | | | | | | | | | | 7 |
| ಮಹಾದೇವ | 1 | 1 | | | | | | | | | | | 2 |
| ಇತರೆ | | 1 | | | | | | | | | | | 1 |
| **ಒಟ್ಟು** | **50** | **13** | **09** | **28** | **17** | **20** | **4** | **4** | **3** | **3** | **4** | **5** | **160** |

ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ಸೇವುಣ ಅರಸರು ಶೈವ ಧರ್ಮದ ಬೆಳವಣಿಗೆ ಬೆಂಬಲಿಸಿದ್ದರು ಎಂಬುದನ್ನು ಗುರುತಿಸಬಹುದಾಗಿದೆ. ಒಟ್ಟು 160 ಶಾಸನಗಳಲ್ಲಿ ಶೈವಧರ್ಮದ ಉಲ್ಲೇಖ ಲಭ್ಯವಾಗಿದ್ದು, ಅದರಲ್ಲಿ ವಿಜಯಪುರ ಜಿಲ್ಲೆಯಲ್ಲಿ 50 ಶೈವ ಶಾಸನಗಳು ಲಭ್ಯವಾಗಿವೆ. ಇದರಿಂದ ಸೇವುಣರ ಕಾಲದಲ್ಲಿ ವಿಜಯಪುರ ಜಿಲ್ಲೆಯಲ್ಲಿ ಶೈವ ಧರ್ಮ ಹೆಚ್ಚು ಪ್ರಭಲವಾಗಿತ್ತು ಎಂಬುದು ತಿಳಿಯಬಹುದಾಗಿದೆ. ಧಾರವಾಡ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ ತಲಾ 03, ರಾಯಚೂರ, ಬೆಳಗಾವಿ, ಬಳ್ಳಾರಿ ಜಿಲ್ಲೆಗಳಲ್ಲಿ ತಲಾ 04 ಮತ್ತು ಕಲಬುರ್ಗಿ ಜಿಲ್ಲೆಯಲ್ಲಿ 5 ಶಾಸನಗಳು ಲಭ್ಯವಾಗಿರುವುದರಿಂದ ಈ ಜಿಲ್ಲೆಗಳಲ್ಲಿ ಶೈವಧರ್ಮವು ಈ ಅರಸರ ಕಾಲದಲ್ಲಿ ಮಂದಗತಿಯ ಬೆಳವಣಿಗೆಯನ್ನು ಕಾಣುತ್ತಿತ್ತು ಎಂಬುದನ್ನು ತಿಳಿಯಬಹುದಾಗಿದೆ. ಅಲ್ಲದೇ ಸಿಂಘಣದೇವನ ಕಾಲದಲ್ಲಿ ಕರ್ನಾಟಕದಲ್ಲಿ ಹೊರಡಿಸಲಾದ 97 ಶೈವ ಶಾಸನಗಳು ದೊರೆತಿರುವುದರಿಂದ ಆತನು ಶೈವ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹವನ್ನು ನೀಡುತ್ತಿದ್ದನೆಂಬುದು, ನಂತರ ರಾಮಚಂದ್ರನ ಕಾಲದ 36 ಶೈವ ಶಾಸನಗಳು ಲಭ್ಯವಾಗಿದ್ದವು ಆದರೆ ಮಹಾದೇವ ಅರಸನ ಕಾಲದಲ್ಲಿ ಈ ಧರ್ಮದ ಬೆಳವಣಿಗೆಯು ಕುಂಟಿತವಾಗಿದ್ದನ್ನು ಗಮನಿಸಬಹುದು ಕುಸಿಯ-ತೊಡಗಿರಬಹುದು ಏಕೆಂದರೆ ಈ ಅರಸನ ಕಾಲದ ಕೇವಲ ಎರಡು ಶಾಸನಗಳು ಮಾತ್ರ ಶೈವ ಧರ್ಮಕ್ಕೆ ಸಂಬಂಧಿಸಿವೆ.



Scanned with OKEN Scanner

ಕ್ರಿ.ಶ. 1188 ರ ಮುದ್ದೇಬಿಹಾಳ ತಾಲೂಕಿನ ಹಳ್ಳೂರಿನ [ಕ. ವಿ. ವಿ. ಶಾ. ಸಂ. X. ಮುದ್ದೇಬಿಹಾಳ. ನಂ. 28] ಶಾಸನವು ಸೇವುಣರ ಕಾಲದ ಶೈವ ಧರ್ಮದ ಬೆಳವಣಿಗೆಯನ್ನು ಕುರಿತು ತಿಳಿಸುವ ಮೊದಲನೆಯ ಶಾಸನವಾಗಿದೆ. ಬಿಲ್ಲಮದೇವನು ದೇವಾಲಯದ ಪಂಚಪರ್ವ, ನೈವೇದ್ಯ ಮುಂತಾದ ದೇವಕಾರ್ಯಗಳಿಗೆ 6 ಮತ್ತರು ಭೂಮಿ; ಹೂವಿನ ತೋಟ ಮತ್ತು ನಿವೇಶನಗಳನ್ನು ದೇವಾಲಯದ ಸ್ಥಾನಪತಿ ಲಕುಳೀಶ್ವರನ ಕಾಲನ್ನು ತೊಳೆದು ದಾನ ನೀಡಿದನೆಂದು ತಿಳಿಸುತ್ತದೆ.

ಹುಬ್ಬಳ್ಳಿ ತಾಲೂಕಿನ ಕಟ್ನೂರಿನ ಕ್ರಿ.ಶ. 1312 ರ ಶಾಸನವು ಕೊನೆಯ ಶಾಸನವಾಗಿದ್ದು, ಅದರಲ್ಲಿ "ಯೋಗಿಗಳ ಮನದ ಕೊನೆಯ [ಜ್ಯೋತೀಶ್ವರನುಂ ವೃಷಭನ] ರೂಪಾಗಿ ಯಜಮಾನನು, ಆಚಾರ್ಯನು ತಾನೇ ಆಗಿ[ಯೋಗಾಧಿಸಂಪನ್ನಖಿಳ] ಯಂಗಳೆಲ್ಲವನ್ನು ಸಂಪಾದಿಸಿ ಯೋಗ ರಮನೀಯ ಕ್ಷೇತ್ರ ಮನೆಸ್ಥಳದ ಅಭಿನವ ಶ್ರೀಶೈಳಂ ಮಾಡಿ ಕಪಿಲಸಿದ್ಧ ಮಲ್ಲಿಕಾರ್ಜುನ ದೇವನು [ಬಂದು ನೆಲೆಸಿ ಪುಣ್ಯಪಾಪಂ]ಗಳಂಬರಂ ಪೇಳ್ದುಬೆಸಂ ಪೇಳುತ್ತವಿರಲುಯೇಂ ಬೆಸಂದೇವಾಯೆನಲುಯೀ ವೂರುಗಳಂ ಭೂಮಿಗಳಂ ಧನಗಳಂ ಯೀಲಿಂಗಕ್ಕೆ ಹಸ್ತೋದಕಂ ಮಾಡಿ ಕೊಟ್ಟುದುದು ಪೇಸದೆಕಳೆದು ಕೊಂಡಿಹೆನು ಎಂಬಾತನ ಮಾತಾಪಿತೃ[ಗಳೆಲ್ಲವಂ ಎಪ್ಪ]ತ್ತೇಳು ಕೋಟಿ ವರುಷಂಬರಂ ಪುಳುಗೊಂಡದ ನರಕದೊಳಗಿಕ್ಕೆ ನೀನಾಹು[ತಿಗೊಳುತ್ತಿರುಕಂ] ಡಾಯೆಲೆಪಾಲವೇ" ಎಂಬ ಮೂಲ ಪಠ್ಯವಿದೆ. ಮುಂದುವರೆದು ಜಗದೇಕ ಗುರು ಶ್ರೀ ಸಿದ್ಧನಾಥ ಎಂಬ ವಿಷಯವ ನ್ನು ಒಳಗೊಂಡಿದೆ. **[ಗೋಗಿ ಹನುಮಾಕ್ಷಿ–ಹುಬ್ಬಳ್ಳಿ ತಾಲೂಕಿನ ಶಾಸನಗಳು ನಂ. 2. ಪು. 53–56]**

**ಶಾಸನಗಳಲ್ಲಿ ಶೈವಪ್ರಬೇಧಗಳು:**

ಶೈವಧರ್ಮವು ಹಲವಾರು ಪ್ರಭೇದಗಳಾಗಿ ವಿಂಗಡಿಸಲ್ಪಟ್ಟಿದ್ದರೂ ಇದರ ಪ್ರಾಬಲ್ಯ ಕುಂದದೆ, ಬೆಳೆಯುತ್ತಲೇ ಸಾಗುತ್ತಿತ್ತು ಎಂಬುದನ್ನು ಶಾಸನಗಳ ಹಿನ್ನೆಲೆಯಲ್ಲಿ ಗಮನಸಿದಾಗ ಕಂಡುಬರುವ ಶೈವಶಾಖೆಗಳೆಂದರೆ ಪಾಶುಪತ, ಕಾಳಾಮುಖ ಮತ್ತು ಕಾಪಾಲಿಕ ಮತ್ತು ಶುದ್ಧಶೈವ ಶಾಖೆಗಳು ಮಾತ್ರ. ಕ್ರಿ.ಶ. 1071 ರ ಕಲಬುರ್ಗಿ ಜಿಲ್ಲೆಯ ಸಗರ ಶಾಸನದಲ್ಲಿ ಅನಂತಶಕ್ತಿಯತಿಯನ್ನು "ಲಾಕುಳಸಿದ್ಧಾಂತ ಸಮುದ್ಧರಣಶೀಲರ್ ಕಾಳಾಮುಖ ಮಹಾವ್ರತಪಾಶುಪತ ಶಿವಸಮಯ ಸಮಾನಪಕ್ಷಪಾತರ್.... ತರ್ಕಶಾಸ್ತ್ರ ವಿಧಾನಪರಿಣತರ್............. ಶ್ರೀಮದನ್ತಶಕ್ತಿಪಂಡಿತರ್ಗೆ ಬಳಂಜದಯ್ನೂರ್ವರು ಸ್ವಾಮಿಗಳು ಕಾಜಗಾಜಿಸೆಟ್ಟಿಯರು ಶ್ರೀಮನ್ನಕರೇಶ್ವರ ದೇವರ ಮಟದ ತಪೋದನರ್ಗೆ ವಿದ್ಯಾದಾನಕ್ಕೆಂದು ಬ್ರಹ್ಮಚರ್ಯದ ಶಾಸ್ತ್ರಾಗಮಕುಶಳ ಶಿಷ್ಯಸಂತಾನ ಮಿಳಾನ್ಯತ್ರತ್ರಯಂಗಸ್ತ್ಯಂ 'ಛಾತ್ರರಪ್ಪತ್ರಕ್ಕಳಿತಸೋಗದಪಾಗ ಗಂಭೀರಮಟಂ ನೈಷ್ಠಿಕಸಾನವಾರಿಗಳಅದಿರೆ ಸಲ್ಲ ಇನ್ತೀ ಧರ್ಮಮಂ ಪ್ರತಿಪಾಳಿಸುವರ್ ಗಾವುಣ್ಡಗಳುಂ ಬಳಂಜದಯ್ನೂರ್ವರುಂ ನಕರಮುಂ ಕಾಜಗಾಜಿಸೆಟ್ಟಿಯರುಂ ನಡೆಯಿಸುವರ್" ಎಂಬಉಲ್ಲೇಖವಿದೆ. **[ಗೋಗಿ ಹನುಮಾಕ್ಷಿ; ಕಲಬುರ್ಗಿಜಿಲ್ಲೆಯ ಶಾಸನಗಳು, ಪು. ೪೩೨]** ಈ ಮೇಲಿನ ಶಾಸನದ ಆಧಾರದ ಮೇಲೆ ಕಾಳಾಮುಖ ಮಹಾವ್ರತ, ಪಾಶುಪತ ಮತ್ತು ಶಿವಸಮಯ ಎಂಬ ನಾಲ್ಕು ಶೈವ ಶಾಖೆಗಳು ಅಸ್ತಿತ್ವದಲ್ಲಿದ್ದವೆಂದೂ; "ಸಮಾನ ಪಕ್ಷಪಾತರ್" ಎಂಬ ದಾಖಲೆಯು ಇವು ಒಂದೇ ಮೂಲದ ಶಾಖೆಗಳೆಂದೂ ಸ್ಪಷ್ಟಪಡಿಸುತ್ತದೆ.

ಕ್ರಿ.ಶ. 1119ರ ನೇಸರಗಿ ಮತ್ತು ಕ್ರಿ.ಶ. 1148ರ ಶಿರಸಂಗಿ ಶಾಸನಗಳಲ್ಲಿರುವ ಕಂದ ಪದ್ಯಗಳಲ್ಲಿ ನಾಲ್ಕು ಶೈವಗಳ ಉಲ್ಲೇಖವಿರುವ ಪದ್ಯ ಹೀಗಿದೆ. "ನೆಗರ್ದಮಹಾವ್ರತಿಗಳೊಳಂ । ನೆಗರ್ದ ಮಹಾಪಾಸುಪತದೊಳ್ಸ್ತೋತ್ರೀಯದೊಳಂ । ನೆಗರ್ದದಗಣಿತಮೆನಲ್ಕೆ । ನೆಗರ್ದ ಕಾಳಾಮುಖಸುಧರ್ಮಂ ಪ್ರಮುಖ" **[ಕರ್ನಾಟಕಇನ್ಸ್ಕ್ರಿಪ್ಷನ್‌ಸಂ. I, ನಂ. 24]** ಅಂದರೆ ಮಹಾವ್ರತ, ಪಾಶುಪತ, ಶ್ರೋತ್ರೀಯ ಮತ್ತು ಕಾಳಾಮುಖವೆಂಬ ನಾಲ್ಕು ಶಾಖೆಗಳನ್ನು ಸೂಚಿಸಿವೆ. ಇವುಗಳಲ್ಲಿ ಶ್ರೋತ್ರೀಯ ಶಾಖೆಯು ಹೆಚ್ಚು ವೇದನಿಷ್ಠವಾಗಿದೆ. ಮಹಾವ್ರತಿ(ಕಾಪಾಳಿ), ಪಾಶುಪತ, ಸ್ತೋತ್ರಿ(ಶೈವ), ಕಾಳಾಮುಖ (ಲಾಕುಳ>ನಕುಲೀಶ) ಎಂದು ಮೇಲೆ ಉಲ್ಲೇಖಿಸಿದ ನಾಲ್ಕು ಶೈವಗಳನ್ನೇ ಪ್ರಸ್ತಾಪಿಸುತ್ತ; ಇವುಗಳಲ್ಲಿ ಕಾಳಾಮುಖವು ಶ್ರೇಷ್ಠವೆಂದು ಹೇಳುತ್ತದೆ. ಇವೆಲ್ಲವುಗಳನ್ನು ಸಮೀಕರಿಸಿದರೆ ನಕುಲೀಶ(ಲಾಕುಳ>ಕಾಳಾಮುಖ), ಪಾಶುಪತ, ಶೈವಸಿದ್ಧಾಂತ, ಮಾಹೇಶ್ವರ(ಶ್ರೋತ್ರಿ), ಮಹಾವ್ರತಿ (ಕಾಪಾಳಿಕ) ಎಂಬ ಈ ನಾಲ್ಕು ಶೈವಶಾಖೆಗಳು ಕರ್ನಾಟಕದಲ್ಲಿ ಹರಡಿಕೊಂಡಿದ್ದವೆಂದು ತಿಳಿಯುತ್ತದೆ. **[ಕಲಬುರ್ಗಿ ಎಂ. ಎಂ; ಮಾರ್ಗ. IV, ಪು. 284]**

ಶ್ರವಣಬೆಳಗೊಳದ ಕ್ರಿ.ಶ. 1129ರ ಶಾಸನವು "ಶೈವಾನ್ ಪಾಶುಪತಾಂಸ್ತಥಾಗತಸುತಾನ್ ಕಾಪಾಲಿಕಾನ್" [ಇ. ಸಿ. ಸಂ. II. ಪು. 42–54] ಎಂದು ಹೇಳುತ್ತ ಶೈವಧರ್ಮದಲ್ಲಿ ಶೈವ ಪಾಶುಪತ ಮತ್ತು ಕಾಪಾಲಿಕ ಎಂಬ ಮೂರು ಶಾಖೆಗಳಿದ್ದವೆಂಬುದನ್ನು ತಿಳಿಸಿದೆ. ಕುರುಬೆಟ್ಟದ ಕ್ರಿ.ಶ. 1245ರ ಶಾಸನವು ಶೈವಶಾಖೆಗಳಾದ ನಕುಲೀಶ, ಪಾಶುಪತ, ಕಾಪಾಲಿಕ ಶೈವಗಳನ್ನು ಉಲ್ಲೇಖಿಸಿದೆ.



Scanned with OKEN Scanner

ಪ್ರಾಚೀನ ಸಾಹಿತ್ಯದಲ್ಲಿ ಉಲ್ಲೇಖವಿರುವ ಬೇರೆ ಬೇರೆ ಪ್ರಭೇದಗಳ ಕುರಿತು–ಪಾಶುಪತ, ಕಾಳಾಮುಖ, ಕಾಪಾಲಿಕ ಮತ್ತು ಶುದ್ಧಶೈವ ಎಂಬ ನಾಲ್ಕು ಪ್ರಬೇಧಗಳನ್ನು ಶಾಸನಗಳು ಹೆಚ್ಚಾಗಿ ಪ್ರಸ್ತಾಪಿಸಿವೆ. ಇವುಗಳಲ್ಲದೆ 9ನೇ ಶತಮಾನದ ಕಾಲದಲ್ಲಿ ಶೈವಧರ್ಮದಲ್ಲಿ ತಮಿಳುಶೈವ, ಕಾಶ್ಮೀರಶೈವ, ವೀರಶೈವ ಹೀಗೆ ಬೇರೆ ಬೇರೆ ಪ್ರಬೇಧಗಳು ಹುಟ್ಟಿಕೊಂಡಿದ್ದರೂ ಪ್ರಸ್ತುತ ಪ್ರಬಂಧಕ್ಕೆ ಸೀಮಿತವಾಗಿರುವ ಕಾಲಾವಧಿಯ ಶಾಸನಗಳು ಇವುಗಳ ಬಗ್ಗೆ ಅಷ್ಟಾಗಿ ಬೆಳಕು ಬೀರಿಲ್ಲ. ಕಾರಣ ಈ ಮೇಲಿನ ನಾಲ್ಕು ಪ್ರಬೇಧಗಳನ್ನು ಕುರಿತು ಯಾದವರ ಶಾಸನಗಳ ಹಿನ್ನೆಲೆಯಲ್ಲಿ ಮುಂದೆ ಚರ್ಚಿಸಲಾಗಿದೆ.

**ಪಾಶುಪತ ಶೈವಶಾಖೆ :**

ಪಾಶುಪತ ಎಂಬ ಪದವು'ಪಶು' ಹಾಗೂ 'ಪತಿ' ಎಂಬ ಎರಡು ಪದಗಳಿಂದ ರೂಪಾಂತರಗೊಂಡಿದೆ. ಪಶು ಎಂದರೆ ಪ್ರಾಣಿ, ಪತಿ ಎಂದರೆ ರಕ್ಷಿಸುವವ, ಒಡೆಯ ಮತ್ತು ದೇವರು ಎಂದರ್ಥ. ಪರಮಾತ್ಮ ಮತ್ತು ಜೀವಾತ್ಮಗಳನ್ನು ಬೆಸೆಯುವ ಮಾರ್ಗವೇ ಪಾಶುಪತ. [**ಚಟಗೋಪೇಕರ್ ನೀಲಮಾ (1998); ಎನ್‌ಕೌಂಟರಿಂಗ್ ಶೈವಿಸಮ್; ಪು. 67**] ಪಾಶುಪತರು ಆರಾಧಿಸುವ ಶಿವನನ್ನು ಪಶುಪತಿ ಎಂದು ಕರೆಯಲಾಗುತ್ತಿತ್ತು. 'ಪ' ಅಂದರೆ ರಕ್ಷಿಸು, ಕಾಪಾಡು, ಎಂಬುದಾಗಿದೆ. [**ತಾಗರೆ ಜಿ. ವಿ. (2001) ಶೈವಿಸಂ ಸಮ್‌ಗ್ಲಿಮ್ಸ್ಲೆಸ್; ಪು. 09**] ಅಂದರೆ ಶಿವನು ಜಗತ್ತಿನ ಸೃಷ್ಟಿಕರ್ತ, ಪಶುಗಳನ್ನು ರಕ್ಷಿಸುವವ, ಕಾಪಾಡುವವನಾಗಿದ್ದನು ಎಂದರ್ಥ. [103]

**ಯಾದವರ ಶಾಸನಗಳಲ್ಲಿ ಪಾಶುಪತ ಪರಂಪರೆ :**

ಪಾಟಲಿಪುತ್ರದಲ್ಲಿ ಆಳುತ್ತಿದ್ದ ಗುಪ್ತರ ಅವಧಿಯಲ್ಲಿ ಪಾಶುಪತ ಪರಂಪರೆ ಹಾಗೂ ಸಿದ್ಧಾಂತಗಳು ಗಟ್ಟಿಗೊಂಡವೆಂದು ಶಾಸನಗಳು ಮತ್ತು ಸಾಹಿತ್ಯ ಕೃತಿಗಳಿಂದ ಸ್ಪಷ್ಟವಾಗಿದೆ. ಪಾಶುಪತ ಪರಂಪರೆ ಕುರಿತ ಮೊದಲ ಶಾಸನವು ಕ್ರಿ.ಶ. 361 ರ ಇಮ್ಮಡಿ ಚಂದ್ರಗುಪ್ತನ ಮಥುರಾದ ಸ್ಥಂಭ ಶಾಸನದಲ್ಲಿ ಲಕುಳೀಶನು ಪಾಶುಪತದ ಸ್ಥಾಪಕ ಎಂದು ಹೇಳುವುದರ ಮೂಲಕ ಕೌಶಿಕನು ಅವನ ಮೊದಲನೆಯ ಶಿಷ್ಯನಾಗಿದ್ದನೆಂದು ಹೇಳಿದೆ. [**ಪಾಂಡೆ ಕೆ. ಸಿ. : 'ಔಟ್‌ಲೈನ್‌ಆಫ್‌ಶೈವ ಫಿಲಾಸಫಿ' ಪು–28**] ಇದು ಪಾಶುಪತ ಪರಂಪರೆಯ ಹುಟ್ಟು ಉತ್ತರ ಭಾರತವಾಗಿತ್ತೆಂದು ಹೇಳಿದ್ದಲ್ಲದೆ. ಈ ಪರಂಪರೆ ಮುಂದೆ ಉತ್ತರದಲ್ಲಿ ನಾಥ ಸಂಪ್ರದಾಯವಾಗಿ, ದಕ್ಷಿಣದಲ್ಲಿ ಪಾಶುಪತ ಹಾಗೂ ಕಾಳಾಮುಖ ಎಂಬ ಹೆಸರಿನಿಂದ ಬೆಳವಣಿಗೆಯನ್ನು ಕಂಡಿತು. [**ಬಡಿಗೇರ ವಾಸುದೇವ :ದೇವರ ದಾಸಿಮಯ್ಯ ಮತ್ತು ಮರುಚಿಂತನೆ, ಪು–80**] ಯಾದವರ ಕಾಲದಲ್ಲಿ ವಿಜಯಪುರ ಜಿಲ್ಲೆಯ 2, ಕಲಬುರ್ಗಿ 3 ಮತ್ತು ಬಳ್ಳಾರಿ ಜಿಲ್ಲೆಯ 1 ಶಾಸನವು ಪಾಶುಪತ ಪರಂಪರೆಯ ಕುರಿತಾಗಿ ತಿಳಿಸಿವೆ

**ಯಾದವರ ಕರ್ನಾಟಕದ ಶಾಸನೋಕ್ತ ಪಾಶುಪತರ ಜಿಲ್ಲಾವಾರು ಪಟ್ಟಿ**

| ಅ.ಸಂ. | ಗ್ರಾಮ | ತಾಲೂಕು | ಜಿಲ್ಲೆ | ರಾಜ | ಕಾಲ | ಮುನಿ | ಉಲ್ಲೇಖ |
|---|---|---|---|---|---|---|---|
| 01 | ಹಳ್ಳೂರು | ಮುದ್ದೇಬಿಹಾಳ | ವಿಜಯಪುರ | ಬಿಲ್ಲಮದೇವ | ಕ್ರಿ.ಶ. 1188 | ಲಕುಲೀಶಪಂಡಿತ | ಕ. ವಿ. ವಿ. ಶಾ. ಸಂ10. ನಂ. 28 |
| 02 | ಕುಳಗೇರಿ | ಜೇವರ್ಗಿ | ಕಲಬುರ್ಗಿ | ಮಹಾದೇವ | ಕ್ರಿ.ಶ. 1265 | ಮಲೆಯಾಳದೇವರ ಶಿಷ್ಯ ಸೋಮೇಶ್ವರ ದೇವರು | ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು. 323–325, |
| 03 | ಮುದನೂರ | ಸುರಪುರ | ಕಲ್ಬುರ್ಗಿ | ಸೋವಿದೇವ | ಕ್ರಿ.ಶ. 1164 | ಚಂದ್ರರಾಶಿ ಪಂಡಿತ | ಗೋಗಿ ಹನುಮಾಕ್ಷಿ & ಹಿರೇಮಠ ಬಿ. ಆರ್. : ಯಡ್ರಾವಿ ಮತ್ತು ಮುದನೂರು ಶಾಸನಗಳು |
| 04 | ಏವೂರು | ಸುರಪುರ | ಕಲ್ಬುರ್ಗಿ | ಸಂಕಮದೇವ | ಕ್ರಿ.ಶ. 1179 | ಜ್ಞಾನರಾಶಿ ಪಂಡಿತ | ಇ. ಆಯ್. ಸಂ. 11. ನಂ. 36(ಜಿ) ಪು–336 |
| 05 | ಮನಗೂಳಿ | ಬಾಗೇವಾಡಿ | ವಿಜಯಪುರ | ಜೈತುಗಿದೇವ | ಕ್ರಿ.ಶ..... | ಮಲೆಯಾಳಿ ಪಂಡಿತನ ಶಿಷ್ಯ ಜ್ಞಾನರಾಶಿಪಂಡಿತ | ಕ. ವಿ. ವಿ. ಶಾ. ಸಂ. 10 ನಂ. 35 |
| 06 | ಕುರುವತ್ತಿ | ಹಡಗಲಿ | ಬಳ್ಳಾರಿ | ಸಿಂಘಣದೇವ | ಕ್ರಿ.ಶ. 1225 | ಸೂರ್ಯಾಭರಣ ಪಂಡಿತ | ಬಳ್ಳಾರಿ ಜಿಲ್ಲೆಯ ಶಾಸನಗಳು ಪು–317 |



Scanned with OKEN Scanner

**ಕಾಳಾಮುಖ ಶೈವಧರ್ಮ :**

ಭಾರತದ ಸನಾತನ ಹಿಂದೂಧರ್ಮದಲ್ಲಿ ಶೈವಧರ್ಮ ಪ್ರಾಚೀನ ಮತ್ತು ಪ್ರಧಾನಧರ್ಮವಾಗಿದೆ. ಈ ಧರ್ಮದಲ್ಲುಂಟಾದ ಭಿನ್ನಾಭಿಪ್ರಾಯಗಳ ಫಲವಾಗಿ ಶೈವ ಧರ್ಮ ಹಲವಾರು ಶಾಖೆಗಳಾಗಿ ವಿಭಜನೆಗೊಂಡು ಆಯಾ ಶಾಖೆಗಳಲ್ಲಿ ಕಾಳಾಮುಖ ಶೈವ ಎಂಬುದು ಪ್ರಧಾನ ಶಾಖೆ. ಸುಮಾರು 9 ರಿಂದ 14ನೇ ಶತಮಾನದಲ್ಲಿಕರ್ನಾಟಕವಲ್ಲದೆ, ಆಂಧ್ರ, ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಪ್ರಭಾವಶಾಲಿಯಾಗಿ ಬೆಳೆದು ಬಂದಿದೆ.

**ಕಾಳಾಮುಖರು ಯಾರು?**

ಮುಖದ ಮೇಲೆ ಕರಿಯ ಗೆರೆಗಳನ್ನು ಹಚ್ಚಿಕೊಳ್ಳುತ್ತಿದ್ದುದರಿಂದ ಇವರನ್ನು ಕಾಳಾಮುಖರೆಂದು ಕರೆಯುತ್ತಿದ್ದರೆಂಬ ಅಭಿಪ್ರಾಯವಿದೆ. ವೃತ್ತವಿಲಾಸದಲ್ಲಿ ಇದನ್ನು ಬೆಂಬಲಿಸುವ ಆಧಾರವಿದೆ. ತಮಿಳುನಾಡಿನ ಶಾಸನವೊಂದುಇವರನ್ನುಕಪ್ಪು ಮುಖದವರೆಂದುಕರೆದಿದೆ. ಮುಖಕ್ಕೆ ಪವಿತ್ರವಾದಕಪ್ಪು ವಸ್ತುವನ್ನು ಬಳಿದುಕೊಳ್ಳುವ ಪದ್ಧತಿಯನ್ನು 1188 ರ ಹಾವೇರಿ ತಾಲೂಕು ಹರಳಹಳ್ಳಿಯ ಶಾಸನದ 'ಕಾಳಾಮುಖದಿಂದಮೆ' ಎಂಬ ಮಾತಿನಿಂದ ಸ್ಪಷ್ಟಪಡಿಸುತ್ತದೆ.

ಕೃಪಟರಾಳ ಕೃಷ್ಣರಾಯರು ತಮ್ಮ 'ಕರ್ನಾಟಕ ಲಾಕುಳ ಶೈವರು' ಎಂಬ ಕೃತಿಯಲ್ಲಿ ಮೊಟ್ಟ ಮೊದಲು ಕಾಳಾಮುಖರ ಬಗ್ಗೆ ಹೇಳಿದ್ದು. ಲಾಕುಳ ಶೈವರು ಮತ್ತು ಕಾಳಾಮುಖ ಒಂದೇ ಎಂದಿದ್ದಾರೆ. ಲಾಕುಳ ಸಿದ್ಧಾಂತದಲ್ಲಿ ಎಲ್ಲರೂ ಕಾಳಾಮುಖರಲ್ಲ. ಕೆಲವರಿಗೆ ಮಾತ್ರ ಕಾಳಾಮುಖರೆಂಬ ವರ್ಣನೆ ಬರುತ್ತದೆ. ಲಾಕುಳ ಸಮಯದ ಅನುಯಾಯಿಗಳಾದ ಮಾಹೇಶ್ವರರಲ್ಲಿ ವಿಶಿಷ್ಟ ದೀಕ್ಷೆ ಹೊಂದಿದವರು ಮಾತ್ರ ಕಾಳಾಮುಖರು. ಆರ್. ಎಸ್. ನಂದಿಯವರ ಪ್ರಕಾರ ಎಂಟನೆಯ ಶತಮಾನದಲ್ಲಿ ಲಾಕುಲೀಶ ಪಾಶುಪತದಿಂದ ಕಾಳಾಮುಖವೆಂಬ ಶೈವವು ಶಾಖೆಯು 9–10ನೆಯ ಶತಮಾನದಲ್ಲಿ ಪ್ರಚಾರಕ್ಕೆ ಬಂದಿತು ನಕುಲೀಶನೇ ಕಾಳಾಮುಖ ಸ್ಥಾಪಕ ಎಂದಿದ್ದಾರೆ. ಸಾಕಿಯವರು ಹೆಣ ಸುಟ್ಟ ಬೂದಿಯಿಂದ ಮುಖವನ್ನುಕಪ್ಪು ಮಾಡಿ ಕೊಳ್ಳುತ್ತಿದ್ದ ಶೈವರೇ ಕಾಳಾಮುಖರು.

ಡಾ. ಆರ್. ಜಿ. ಭಂಡಾರಕರ ಅವರು ಕಾಳಾಮುಖರೂ, ಕಾಪಾಲಿಕರೂ ಒಂದೇ ಎಂದು ಹೇಳುತ್ತಾರೆ. ಆದರೆ ಇದಕ್ಕೆ ಯಾವ ಆಧಾರವೂ ಇಲ್ಲ. ಕಾಪಾಲಿಕರದು ಸಂಪೂರ್ಣವಾಗಿ ವಾಮಾಚಾರಿಗಳ ಪಂಥವಾದರೆ ಕಾಳಾಮುಖರದು ಶುದ್ಧ ಸಾತ್ವಿಕಾಚರಣೆಗಳ ಪಂಥ. ಸಮಗ್ರ ಕನ್ನಡ ಶಾಸನಗಳನ್ನು ಅಧ್ಯಯನ ಮಾಡಿದರೆ ಎಲ್ಲಿಯೂ ಕಾಳಾಮುಖರನ್ನು ಕಾಪಾಲಿಕರೆಂದು ಕರೆದಿಲ್ಲವೆಂಬುದು ಗೋಚರವಾಗುತ್ತದೆ. **[ಚಿದಾನಂದಮೂರ್ತಿ. ಎಂ; ಕನ್ನಡ ಶಾಸನಗಳ ಸಾಂಸ್ಕೃತಿಕಅಧ್ಯಯನ ಪುಟ–142]**

**ಯಾದವರ ಕಾಲದ ಕರ್ನಾಟಕದ ಶಾಸನಗಳಲ್ಲಿ ಕಾಳಾಮುಖರು**

ಯಾದವ ಅರಸರ ಕಾಲದಲ್ಲಿಯೂ ಕಾಳಾಮುಖ ಮುನಿಗಳು ರಾಜಾಶ್ರಯ ಪಡೆದುಕೊಂಡಿದ್ದರೆಂದು 11 ಶಾಸನಗಳು ಹೇಳುತ್ತವೆ. ಅವುಗಳಲ್ಲಿ ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಯ ತಲಾ 1, ಗದಗ ಜಿಲ್ಲೆಯ 3, ಶಿವಮೊಗ್ಗ 2 ಮತ್ತು ಹಾವೇರಿ ಜಿಲ್ಲೆಯ 4 ಶಾಸನಗಳು ಕಾಳಾಮುಖರ ಕುರಿತು ಪರಿಚಯಿಸುತ್ತವೆ. ಕಾಳಾಮುಖ ಶಾಖೆಯು ಮುಖ್ಯವಾಗಿ ಎರಡು ಪರ್ಷಗಳನ್ನು ಒಳಗೊಂಡಿದೆ.

**ಯಾದವರ ಕರ್ನಾಟಕದ ಶಾಸನೋಕ್ತ ಕಾಳಾಮುಖ ಜಿಲ್ಲಾವಾರು ಪಟ್ಟಿ**

| ಅ.ಸಂ. | ಗ್ರಾಮ | ತಾಲೂಕು | ಜಿಲ್ಲೆ | ಅರಸ | ಕಾಲ | ಮುನಿಗಳು | ಉಲ್ಲೇಖ |
|---|---|---|---|---|---|---|---|
| 01 | ಒಪ್ಪರಗಿ | ಸಿಂಧಗಿ | ವಿಜಯಪುರ | ಬಿಲ್ಲಮ | ಕ್ರಿ.ಶ. 1192 | ಭುಜಂಗಾವಳಿ ಶಾಖೆಯ ರಾಜಗುರು | ಎಸ್. ಆಯ್. ಆಯ್ ಸಂ. 20. ನಂ. 178 |
| 02 | ಬಳ್ಳಿಗಾವೆ | ಶಿಕಾರಿಪುರ | ಶಿವಮೊಗ್ಗ | 2ನೇಸಿಂಘಣ | ಕ್ರಿ.ಶ. 1215 | ಶ್ರೀಕಂಠದೇವ, ವಾಮಶಕ್ತಿ, | ಇ. ಸಿ. ಸಂ. 07(ಹೊಸ) ಶಿಕಾರಿಪುರ–95 |
| 03 | ಮುಳಗುಂದ | ಗದಗ | ಗದಗ | 2ನೇಸಿಂಘಣ | ಕ್ರಿ.ಶ. 1225 | ಮಲ್ಲಿಕಾರ್ಜುನ | ಹನುಮಾಕ್ಷಿ ಗೋಗಿ, ಅನುಶಾಸನ ಪು. 157 |
| 04 | ತಿಳವಳ್ಳಿ | ಹಾನಗಲ್ | ಹಾವೇರಿ | 2ನೇಸಿಂಘಣ | ಕ್ರಿ.ಶ. 1238 | ರಾಜಗುರು ಸರ್ವೇಶ್ವರ | ಕೆ. ಆರ್. ಆಯ್ ನಂ. 25 1845–46 |



Scanned with OKEN Scanner

| | | | | | | | |
|---|---|---|---|---|---|---|---|
| 05 | ರಟ್ಟಿಹಳ್ಳಿ | ಹಿರೇಕೆರೂರ | ಹಾವೇರಿ | 2ನೇಸಿಂಘಣ | ಕ್ರಿ.ಶ. 1237 | ಮೂಜು ಜಾವಿದೇವ | ಕೆ. ಆರ್. ಆಯ್ ನಂ. 25 1948–49 |
| 06 | ರಟ್ಟಿಹಳ್ಳಿ | ಹಿರೇಕೆರೂರ | ಹಾವೇರಿ | 2ನೇಸಿಂಘಣ | ಕ್ರಿ.ಶ. 1238 | ಮೂಜು ಜಾವಿದೇವರು | ಕೆ. ಆರ್. ಆಯ್ ನಂ. 26 1948–49 |
| 07 | ರಟ್ಟಿಹಳ್ಳಿ | ಹಿರೇಕೆರೂರ | ಹಾವೇರಿ | 2ನೇಸಿಂಘಣ | ಕ್ರಿ.ಶ. 1238 | ಮೂಜು ಜಾವಿದೇವರು | ಕೆ. ಆರ್. ಆಯ್ ನಂ. 27 1948–49 |
| 08 | ಮುನವಳ್ಳಿ | ಸವದತ್ತಿ | ಬೆಳಗಾವಿ | 2ನೇಸಿಂಘಣ | ಕ್ರಿ.ಶ. 1252 | ಸೋಮೇಶ್ವರ | ಕೆ. ಆಯ್. ನಂ. 31 |
| 09 | ಲಕ್ಷ್ಮೇಶ್ವರ | ಶಿರಹಟ್ಟಿ | ಗದಗ | 2ನೇಸಿಂಘಣ | ಕ್ರಿ.ಶ. 1215 | ಮೂರು ಜಾವಿದೇವರು | ಎಸ್. ಆಯ್. ಆಯ್ ಸಂ. 20. ನಂ. 191 |
| 10 | ಲಕ್ಷ್ಮೇಶ್ವರ | ಶಿರಹಟ್ಟಿ | ಗದಗ | 2ನೇಸಿಂಘಣ | ಕ್ರಿ.ಶ. 1227 | ಮೂರು ಜಾವಿದೇವ | ಎಸ್. ಆಯ್. ಆಯ್ ಸಂ. 20. ನಂ. 198 |
| 11 | ಚಿಕ್ಕಮಾಗಡಿ | ಶಿಕಾರಿಪುರ | ಶಿವಮೊಗ್ಗ | 2ನೇಸಿಂಘಣ | ಕ್ರಿ.ಶ. 1275 | ಮೂರು ಜಾವಿದೇವ | ಇ. ಸಿ. ಸಂ. 07(ಹೊಸ) ಶಿಕಾರಿಪುರ–361 |

**ಶಕ್ತಿಪರ್ಷೆ:**

ಶಕ್ತಿಪರ್ಷೆಯು ಕಾಳಾಮುಖ ಪರಂಪರೆಯ ಪ್ರಧಾನ ಶಾಖೆಯಾಗಿದ್ದು, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಬಳ್ಳಿಗಾವೆಯ ಕೇದಾರೇಶ್ವರದೇವಾಲಯಇದರ ಮುಖ್ಯಕೇಂದ್ರ. ಕಾಳಾಮುಖ ಶಾಖೆಯ ಶಕ್ತಿಪರ್ಷೆಯು ಪರ್ವತಾವಳಿ ಮತ್ತು ಭುಜಂಗಾವಳಿ ಎಂಬ ಎರಡು ಶಾಖೆಗಳನ್ನು ಹೊಂದಿದೆ.

**ಪರ್ವತಾವಳಿ:**

ಕರ್ನಾಟಕದಲ್ಲಿ ಈವರೆಗೆ ದೊರೆತಿರುವ 25 ಶಾಸನಗಳು 'ಪರ್ವತಾವಳಿ' ಶಾಖೆಗೆ ಸಂಬಂಧಿಸಿದ್ದು, – ಅವುಗಳಲ್ಲಿ ಯಾದವರ–01 ಶಾಸನ ಈ ಕುರಿತಾಗಿ ತಿಳಿಸುತ್ತದೆ. ಯಾದವ ಕುಲದ ಇಮ್ಮಡಿ ಸಿಂಘಣದೇವನ ಬಳ್ಳಿಗಾವೆಯ ಕ್ರಿ.ಶ. 1215ರ ಶಾಸನವು "ಹೃದಯಕಮಳ ಕಾಂತಾಯಂಪ್ರಶಿಷ್ಯ ಸಿದ್ಧಾಂತ ಶಿವಮಮೇಯಂತಂ ಚಿದಾನಂದರೂಪಉಪಾಸತೇ ವಿರೂಪಾಕ್ಷಂತತ್ರಕೋಟಿಮರಸ್ಥಿ ವಾಮಶಕ್ತಿಯ್ಯರ್ಧಾರಾಪೂರ್ವ್ವ ಮುಪಮನ್ಯರ್ಮ್ಮಾ ಹಾತೆಯಃ ಅನ್ತಲ್ಲಿದೇವಭೋಗಮಂ ಆಚಾರ್ಯ್ಯ ಶ್ರೀಕಂಠದೇವರ ಶಿಷ್ಯ ಮಹಾಬ್ರತಿ ವಾಮಶಕ್ತಿದೇವರು" ಎಂದು ಹೇಳುತ್ತದೆ. [ಇ. ಸಿ. ಸಂ. **VII.** ಶಿಕಾರಿಪುರ–ನಂ. **141**]

**ಮೂವರುಕೋಣೆಯ ಸಂತತಿ:**

'ಪರ್ವತಾವಳಿ' ಶಾಖೆಯಯ ಪ್ರಮುಖ ಸಂತತಿಎಂದರೆ–ಮೂವರುಕೋಣೆಯ ಸಂತತಿ. ಈ ಕುರಿತು ಶಾಸನಗಳಲ್ಲಿ ಸಾಕಷ್ಟು ಉಲ್ಲೇಖಗಳು ದೊರೆತಿವೆ. ಜೆ. ಎಫ್. ಫ್ಲೀಟ್ಅವರ ಪ್ರಕಾರ– ಮೂವರುಕೋಣೆಯ ಸಂತತಿಯ ಕುರಿತು ಹೇಳುವಾಗ ಮುರುಎಂದರೆ ಮುತ್ ಎಂದರ್ಥ ಇದರಲ್ಲಿ ಮೂರು ಜನ ಎಂಬ ಪದದ ಷಷ್ಠಿ ವಿಭಕ್ತಿ ಇದೆ, ಇಲ್ಲಿ ಕೋಣೆ ಎಂಬ ಪದಕ್ಕೆ ಕನ್ನಡ ನಿಘಂಟಿನಲ್ಲಿ ಮನೆಯ ಒಳಭಾಗ, ಗೂಡು ಅಥವಾ ಕೊಠಡಿಎಂದರ್ಥ.

**ಕಿಟ್ಟೀಗಾವಿ ಸಂತತಿ:**

ಕ್ರಿ.ಶ. 1188ರ ಹರಳಹಳ್ಳಿಯ ಶಾಸನದ ಆಧಾರದಿಂದ ಶ್ರೀಮತಿ ಫಿಲಿಯೋಜಾ ವಸುಂಧರಾ ಅವರು "ಧೃತತನುಧಾತು ಕಿಟ್ಟಮಿಳೆಯಲ್ತ ಪದೋಷ್ಮೆಗೆ ಕಿಟ್ಟಗಾವೆ ಸಂತತಿಯದು ಪರ್ವತಾವಳಿಯೆನಿಪ್ಪುದು ನಿಶ್ಚಲವೃತ್ತಿಯಿಂ ನಿಯಾಮಿತ ನಿಯಮೋತ್ಥ ಕಾಳಾಮುಖದಿಂದಮೇ ಕಾಳಾಮುಖತ್ವಮೊಪ್ಪೆ ತೋರುಗುಂ"ಎಂಬ ಉಲ್ಲೇಖದನ್ವಯ ಶಂಭುಲಿಂಗಭೃತಿಪನ ದೇಹಕ್ಕೆ ಹಿಡಿದಿದ್ದ ಧಾತುವಿನ ಕಿಟ್ಟವು ಅವನ ತಪಃ ಪ್ರಭಾವಕ್ಕೆ ಆವಿಯಾಗಿ ಇಳಿಯಲು ಅದುವೇ ಕಿಟ್ಟಗಾವಿಯಾಯಿತು ಎಂದು ತಿಳಿಸಿದ್ದಾರೆ. [**ಫಿಲಿಯೋಜ ವಸುಂಧರ; (2003); ಕರ್ನಾಟಕ ಲಾಕುಳ ಶೈವ ಜಕ್ಕಣಾಚಾರ್ಯರು; ಪು. 40**] ಇಂದಿನ ಶಿವಮೊಗ್ಗ



Scanned with OKEN Scanner

ಜಿಲ್ಲೆಯಲ್ಲಿರುವ ಕಿಟ್ಟದಹಳ್ಳಿಯೇ ಕಿಟ್ಟೇಗಾವಿ. ಇದು ಶೈವ ಪರಂಪರೆಯ ಮೂಲ ನೆಲೆಯಾಗಿದೆ ಎಂಬ ನಂಬಿಕೆಯಿದೆ. ಶಂಭುಲಿಂಗ ಬ್ರತೀಪನೇ ಕಿಟ್ಟೇಗಾವಿ ಸಂತತಿಯ ಮೂಲ ಪುರಷನೆಂದು ನಂಬಲರ್ಹವಾಗಿದೆ.

ಕಿಟ್ಟಗಾವೆ ಸಂತತಿಯನ್ನು ದಾಖಲಿಸುವ ಕರ್ನಾಟಕದ 9 ಶಾಸನಗಳಲ್ಲಿ, ಹಾವೇರಿ ಜಿಲ್ಲೆಯಲ್ಲಿ–06, ಗದಗ, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ತಲಾ ಒಂದೊಂದು ಶಾಸನಗಳಿದ್ದು; ಹಾವೇರಿ ಪರಿಸರಕ್ಕೆ ಹೊಂದಿಕೊಂಡ ಸ್ಥಳದಲ್ಲಿ ಇದರ ಅಸ್ತಿತ್ವವಿರುವುದು ವಿಶೇಷ. ಕಲ್ಯಾಣಚಾಲುಕ್ಯರ ಕಾಲದಲ್ಲಿ 03, ಕಳಚುರಿಗಳ ಮತ್ತು ಯಾದವರ ತಲಾ ಒಂದೊಂದು ಶಾಸನವು ಈ ವಿಷಯವನ್ನು ದಾಖಲಿಸುತ್ತದೆ. ಯಾದವ ಇಮ್ಮಡಿ ಸಿಂಘಣನ ರಟ್ಟಿಹಳ್ಳಿಯ ಕಡಂಬೇಶ್ವರ ದೇವಾಲಯದ ಕ್ರಿ.ಶ. 1238ರ ಶಾಸನವು [ಇ. ಸಿ. ಸಂ. **VI**. ನಂ. **44**] ಕಾಳಾಮುಖ ಪರ್ವತಾವಳಿ ಮತ್ತು ಕಿಟ್ಟೇಗಾವಿ ಸಂತತಿಗೆ ಸೇರಿದ ಮೂರುಜಾವಿದೇವರ ಗುರುಪರಂಪರೆಯನ್ನು ಪರಿಚಯಿಸುತ್ತ– ವಾಮದೇವನ ಶಿಷ್ಯ ವಾದಿರುದ್ರದೇವ> ಒಂದನೆಯ ಕ್ರಿಯಾಶಕ್ತಿಪಂಡಿತ> ಅಮೃತರಾಶಿ> ಶ್ರೀಕಂಠದೇವ> ಎರಡನೆಯ ಕ್ರಿಯಾಶಕ್ತಿ> ಸರ್ವೇಶ್ವರ> ಕಲ್ಯಾಣಶಕ್ತಿ> ಒಂದನೆಯ ಕಲ್ಯಾಣಶಕ್ತಿ> ಎರಡನೆಯ ಕಲ್ಯಾಣಶಕ್ತಿ> ಮೂರುಜಾವಿದೇವ> ಲಕುಲೀಶ> ಎರಡನೆಯ ಮೂರುಜಾವಿದೇವ ಎಂದು ದೀರ್ಘ ಶಿಷ್ಯಪರಂಪರೆಯನ್ನು ಹೇಳುತ್ತಾ ಮೂರುಜಾವಿದೇವನೊಂದಿಗೆ ಕಿಟ್ಟೆಗಾವಿ ಸಂತತಿಯವರು ಉತ್ತಮ ಸಂಪರ್ಕ ಹೊಂದಿದ್ದನ್ನು ನೆನಪಿಸುತ್ತದೆ.

**ಪರ್ವತಾವಳಿಯ ಬೆಳ್ಳಿಯ ಸಂತಾನ**

ಕಾಳಾಮುಖ ಪರಂಪರೆಯ ಪರ್ವತಾವಳಿಯ ಶಾಖೆಗಳಲ್ಲಿ ಬೆಳ್ಳಿಯ ಸಂತಾನವೂಒಂದು. ಇದರ ಕುರಿತು8 ಶಾಸನಗಳು ಕರ್ನಾಟಕದಲ್ಲಿ ಲಭ್ಯವಾಗಿದ್ದು, ಗದಗ ಜಿಲ್ಲೆಯಲ್ಲಿ–6, ಬೆಳಗಾವಿ ಮತ್ತು ಹಾವೇರಿಜಿಲ್ಲೆಯಲ್ಲಿ ತಲಾ ಒಂದೊಂದು ಶಾಸನಗಳಿವೆ. ಈ ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯರ–4, ಯಾದವ ಹಾಗೂ ಹೊಯ್ಸಳರ ಕಾಲದ ತಲಾ ಒಂದು ಶಾಸನದಲ್ಲಿ ಬೆಳ್ಳಿಯ ಸಂತಾನದ ಉಲ್ಲೇಖವಿದೆ. ಬೆಳ್ಳಿಯಸಂತಾನ ಕುರಿತು ತಿಳಿಸುವ ಮೊದಲ ಶಾಸನ ಮುಳಗುಂದದ ಕ್ರಿ.ಶ. 1062 ರ ಶಾಸನದಲ್ಲಿ [**ಎಸ್. ಆಯ್. ಆಯ್. ಸಂ. IX. ಭಾಗ. 1. ನಂ. 97**] ನಗರೇಶ್ವರದೇವಾಲಯದ ಸ್ಥಾನಪತಿ ಧ್ರುವೇಶ್ವರ ಪಂಡಿತದೇವನು ಇಂದ್ರಿಯಗಳನ್ನು ಜಯಿಸಿ ಕಾಮಾರಿಯಾದ ಶಿವನನ್ನು ಆರಾಧಿಸುವ ಮುನಿಯು ತಪಸ್ಸಿನಲ್ಲಿ ವಶಿಷ್ಠ ಹಾಗೂ ಅಗಸ್ತ್ಯರಿಗೆ ಸಮಾನನು. ಅವನಿಂದ ಆ ನಗರೇಶ್ವರ ಮಠವು ನೈಷ್ಠಿಕ ಮಠವಾಗಿ ಬೆಳೆದು ಬೆಳ್ಳಿಯ ಸಂತತಿಯೊಂದಿಗೆ ಸರತಿಯಮಠದ ಪ್ರಸ್ತಾಪವೂಇದೆ. ಇದುಇಡೀ ವಸುಧೆಗೇ ಪೂಜ್ಯವಾದುದು ಎಂದಿದೆ. ಇದರೊಂದಿಗೆ ಕಾಳಾಮುಖ ಪರಂಪರೆಯ 'ಬೆಳ್ಳಿಯದೇವರಮಠ'ದ ಉಲ್ಲೇಖವೂ ಇದೆ. ಶಾಸನವುಧ್ರುವೇಶ್ವರ ಪಂಡಿತರ ನೇತೃತ್ವದಲ್ಲಿ–"ಮಠಮಿದು ನೈಷ್ಠಿಕ ಮಠಂ"ಎಂಬ ವಾಕ್ಯವನ್ನು ಹೊಂದಿದ್ದು; ಈ ಮಠದಲ್ಲಿ ನೈಷ್ಠಿಕ ಬ್ರಹ್ಮಚಾರಿಗಳಿಗೆ ಮಾತ್ರಇರಲುಅವಕಾಶವಿದ್ದು; ಇದನ್ನು ಕಾಪಾಡಿಕೊಳ್ಳದವರನ್ನು ಮಠದಿಂದ ಹೊರಗೆ ಹಾಕಲಾಗುತ್ತಿತ್ತು. ಕ್ರಿ.ಶ. 1118 ರ ಲಕ್ಷ್ಮೇಶ್ವರದಶಾಸನದಲ್ಲಿ [**ಅದೇ, ಸಂ. XX ನಂ. 78**] "ಬೆಳ್ಳೆಯ ದೇವರ ಸಂತಾನೋದ್ಭವರಪ್ಪ ಸಾಮವೇದಿ ಪಂಡಿತ" ಎಂಬ ವಿಷಯವಿದೆ.

ಯಾದವರ ಕಾಲದ ಗದಗ ಜಿಲ್ಲೆಯ ಹೊಂಬಳದ ಕ್ರಿ.ಶ. 1189ರ ಶಾಸನದಲ್ಲಿ [**ಅದೇ, ಸಂ. XV. ನಂ.** 73] ಬೊಂತೆಯ ಮುನಿಯನ್ನು "ಕಾಳಾಮುಖಮುನೀಶ್ವರ ನಿಶ್ಚಿಂತಾತ್ಮನಾಗಿ ಬೆಳ್ಳೆಯ ಸಂತಾನಂ ನೆಗಳ್ದ ಪರ್ವತಾವಳಿಯಿರ್ಪಂ ಆ ಕಲಿಯುಗಸಿದ್ಧ ಲಕುಲೀಶ್ವರ ನಾಮಧೇಯನೆನಿಸಿದ" ಎಂದಿದೆ. ಇದು ಕಾಳಾಮುಖ ಹಾಗೂ ಪರ್ವತಾವಳಿ ಮತ್ತು ಬೆಳ್ಳೆಯ ಸಂತಾನಕ್ಕೂಪ್ರತ್ಯಕ್ಷವಾದ ಸಂಬಂಧವನ್ನು ಸಾಕ್ಷೀಕರಿಸುತ್ತದೆ. ಇಲ್ಲಿರುವ ಕಾಳಾಮುಖ ಮುನಿಯು ತನ್ನ ಗುರು ಬೊಂತೇಶ್ವರನ ಸ್ಮರಣೆಗಾಗಿ ಪರೋಕ್ಷ ವಿನಯದಿಂದ ಅದೇ ಹೆಸರಿನ ದೇವಾಲಯವನ್ನು ಕಟ್ಟಿಸಿದ್ದ. ಅಂದರೆ ಈ ವೇಳೆಗಾಗಲೇ ಬೆಳ್ಳೆಯ ಸಂತಾನದ ಅಥವಾ ಕಾಳಾಮುಖ ಪಂಡಿತರ ಪಾಂಡಿತ್ಯದ ಪ್ರಸಿದ್ಧಿ ಪ್ರಖರವಾಗಿ ಬೆಳಗುತ್ತಿತ್ತು.

ಹೀಗೆ ಕಾಳಾಮುಖರು ಸಾತ್ವಿಕ ಆಚರಣೆಗಳನ್ನು ಅನುಸರಿಸುತ್ತಾ ಜನರೊಂದಿಗೆ ಬೆರೆತು, ದೇವಾಲಯಗಳ ಆಚಾರ್ಯರಾಗಿ, ತಪೋಧನರಾಗಿ, ರಾಜಗುರುಗಳಾಗಿ ಕಾರ್ಯಗಳನ್ನು ನಿರ್ವಹಿಸುವುದರ ಮೂಲಕ ಧರ್ಮದೊಂದಿಗೆ ಸಮಾಜ ಹಾಗೂ ಶೈಕ್ಷಣಿಕ ವ್ಯವಸ್ಥೆಯಲ್ಲಿ ಗಮನಾರ್ಹವಾದ ಬದಲಾವಣೆಗಳನ್ನು ಮಾಡಿದ್ದರೆಂಬುದನ್ನು ಶಾಸನಗಳು ಪ್ರಸ್ತಾಪಿಸಿವೆ. ಕಳಾಮುಖರು ಕಾಲಾಂತರದಲ್ಲಿ ವೀರಶೈವದಲ್ಲಿ ಲೀನವಾಗುವುದರ ಮೂಲಕ ಅವನತಿ ಹೊಂದಿದರು. ಇದಕ್ಕೆ ಸಾಕ್ಷಿ ಎಂಬಂತೆ ಯಾದವರ ಕೊಕಟನೂರಿನ ಶಾಸನವು [ಇ. ಸಿ. **ಸಂ. II. ನಂ. 38**] ಸ್ಥಾವರ, ಜಂಗಮ ಮತ್ತು ಶಿವಗಣಗಳ ಕುರಿತಾಗಿ ಹೀಗೆ ಹೇಳುತ್ತದೆ. "ದಯಾಪರರು ಯಿಂದ್ರಿಯನಿಗ್ರಹಸೀಲರುಂ ನಿರಂತರ । ರತಿಲೋಲರುಂ ಹಲಬರೀಸ್ವರನಲ್ಲಿ



Scanned with OKEN Scanner

ಮಹಾಗಣೇಶ್ವರರು ॥ ಸ್ಥಾವರಜಂಗಮಂ ದ್ವಿವಿಧ ಲಿಂಗಮುಮೆಂಬ ಮಹಾಮಹಾ[ತ್ವ] ಮತ್ತಾವಜಾಂಡ ಕೋಟಿಗಳು ತಂಮುವಲೋಕನ ಮಾತ್ರ ಪುಟ್ಟಿಕುಂಕಾವುದನಂತ ಕಾಲ ನುಮಿಸಾರ್ಧದಿ ಭಕ್ಷಿಪುದೆಂದೊಡಿಂನು ಹೇಳಾವನು ಬಣ್ಣಿಪಂ ಸಿವಗಣದೊಂದು ಸಮಗ್ರ ಸಕ್ತಿಯಿಂ ॥ ಎಂದು ತಿಳಿಸುತ್ತದೆ. ಅಂದರೆ ಶೈವಧರ್ಮದಲ್ಲಿದ್ದ ಸ್ಥಾವರ ಮತ್ತು ವೀರಶೈವದ ಜಂಗಮ ಎಂಬ ಎರಡು ರೂಪಗಳಿಂದ ಭಿನ್ನವಾಗತೊಡಗಿದ ಧರ್ಮದ ತತ್ವಗಳನ್ನು ಕಂಡ ಶರಣರು ಕಾಲನೆಂಬ ಯಮನು ಶೈವಧರ್ಮದ ನಾಶಕ್ಕೆ ಕೈಹಾಕಿದ ಎಂದು ತಿಳಿಸುವುದರ ಮೂಲಕ ವೀರಶೈವಧರ್ಮದ ಪ್ರಭಾವದಿಂದಾಗಿ ಶೈವದ ಹೀನ ಸ್ಥಿತಿಯನ್ನು ತಿಳಿಸುತ್ತದೆ.

**ಕಾಪಾಲಿಕರು:**

ಕಾಪಾಲಿಕವು ಶೈವಧರ್ಮದ ಶಾಖೆಗಳಲ್ಲಿ ಒಂದು. ಈ ಶಾಖೆಗಳ ಕುರಿತಾಗಿ ಹೆಚ್ಚಿನ ಶಾಸನಗಳು ದೊರೆಯದಿದ್ದರೂ ಕರ್ನಾಟದಲ್ಲಿ ಕೆಲವೇ ಶಾಸನಗಳು ಲಭ್ಯವಾಗಿವೆ. ಕಾಪಾಲಿಕರು– ಪಾಶುಪತ ಮತ್ತು ಕಾಳಾಮುಖ ಮುನಿಗಳಂತೆ ಸಾಹಿತ್ಯದಲ್ಲಿ ಆಸಕ್ತಿಯನ್ನು ಹೊಂದಿರಲಿಲ್ಲ. ಇವರು ಉಗ್ರ ಮತ್ತು ವಿಚಿತ್ರ ಆಚರಣೆಗಳಲ್ಲಿ ನಂಬಿಕೆಯನ್ನು ಹೊಂದಿದ್ದರು. 'ಕಾಪಾಲಿಕ' ಎಂಬ ಪದವು ಕಪಾಲ ಎಂಬುದರ ರೂಪಾಂತರವಾಗಿದೆ. ಕಪಾಲವೆಂದರೆ ತಲೆಬುರುಡೆ. ಯಾರು ಕೈಯಲ್ಲಿ ಮಾನವನ ಕಪಾಲವನ್ನು ಹಿಡಿದು ಅದರಲ್ಲಿಯೇ ಭಿಕ್ಷೆಯ ಅನ್ನವನ್ನು ಸೇವಿಸುತ್ತ, ಹೆಂಡವನ್ನು ಕುಡಿಯುತ್ತ ತಿರುಗುತ್ತಾರೆಯೋ ಅಂಥವರನ್ನು ಕಾಪಾಲಿಕರು ಎಂದು ಕರೆಯುತ್ತಿದ್ದರು. ಅಲ್ಲದೆ ಇವರು ನರಬಲಿಯಂಥ ಕ್ರೂರ ಆಚರಣೆಗಳಿಗೂ ಪ್ರಸಿದ್ಧರಾಗಿದ್ದರು. [**ದಾಸ್ತೋವಸ್ಕಿ ಎಸ್. ಜಿ (1988); ದಕ್ಯಾನನ್ ಆಫ್ ದಿ ಶೈವಾಗಮ ಆ್ಯಂಡ್ ಕುಬ್ಜಿಕ ತಂತ್ರಾಸ್ ಆಫ್ ದಿ ಕೌಳ ಟ್ರೆಡಿಷನ್. ಪು. 26**]

**ಕರ್ನಾಟಕದ ಶಾಸನಗಳಲ್ಲಿ ಕಾಪಾಲಿಕರು:**

ಬೆಳಗಾವಿ ಜಿಲ್ಲೆಯ ಚೌಡದಾನಪುರದ ಕ್ರಿ.ಶ. 1288ರ ಯಾದವ ದೊರೆ ರಾಮಚಂದ್ರನ ಶಾಸನವು [**ಎಸ್. ಆಯ್. ಆಯ್. ಸಂ. XVIII. ನಂ. 265**] ತೃಟಿತವಾಗಿದ್ದು, "ಸರೋರುಹ........ ಪ್ರಧಾಂ.. [ಕಳಾಪ]ತಿಕ......... ಕಾಂತಿ.... ಹಂಸ....... ಕಾಳ..... ಮಾತಾ@ ಅವ್ಯಾದವ್ಯಾಹತ.. ಭಾಸ... ಖಟ್ವಾಂಗ.... [ಹಸ]........ ಹತಂ......... ಯಜ್ಞೋಪವೀತಂ" ಎಂದು ಉಲ್ಲೇಖದಿಂದಾಗಿ ಈ ಶಾಸನವು ಕಾಪಾಲಿಕ ಕುರಿತ ಶಾಸನವಾಗಿದೆ ಎಂದು ಹೇಳಬಹುದು.

**ಶುದ್ಧಶೈವಪರಂಪರೆ:**

ಶೈವ ಧರ್ಮದಕವಲುಗಳು ದಿನದಿಂದ ದಿನಕ್ಕೆ ವಿಸ್ತಾರವಾಗುತ್ತ ಸಾಗಿದ ಶೈವಶಾಖೆಗಳಲ್ಲಿ 'ಶುದ್ಧಶೈವ'ವೂ ಒಂದು. ಡಾ. ಸಿ. ಚೆ. ನಂದಿಮಠರ ಪ್ರಕಾರ ಕಾಶ್ಮೀರದಲ್ಲಿ ಹುಟ್ಟಿದ ಶುದ್ಧಶೈವ ಪರಂಪರೆಯು ಸಿದ್ಧಸೋಮಾನಂದನ (11ನೇ ಶತಮಾನದ) 'ಶಿವದೃಷ್ಟಿವೃತ್ತಿ' ಮತ್ತು'ತಂತ್ರಾಲೋಕಟೀಕು'ಗಳಲ್ಲಿ ಉಲ್ಲೇಖವಾಗಿದೆ. ಋಷಿಯ ಮುಖದಿಂದ ಹುಟ್ಟಿತ್ತೆಂದು ಭಾವಿಸುವ 'ಶುದ್ಧಶೈವ' ತತ್ವಗಳು ಕಲಿಯುಗದಲ್ಲಿ ನಾಶವಾಗತೊಡಗಿದಾಗ; ಕೈಲಾಸದಲ್ಲಿ ಶಿವನು ಆಗಮ ಉಪನಿಷತ್ತುಗಳ ಸಾರಭೂತವಾದ 'ತ್ರಿಕ' ಎಂಬ ಮತವನ್ನು ಪ್ರಸಾರ ಮಾಡಲು–ದೂರ್ವಾಸನಿಗೆ ಆದೇಶಿಸಿದನು. ಆಗ ಅವನು ಅಮದನಕ, ಶ್ರೀನಾಥ, ತ್ರ್ಯಂಬಕ ಎಂಬ ಹೆಸರಿನ ಮೂವರು ಮಾನಸಪುತ್ರರನ್ನು ಸೃಷ್ಟಿಸಿ, ಅವರಿಗೆದ್ವಯ, ದ್ವಯಾದ್ವಯ, ಅದ್ವಯ ಮತಗಳ ಪಸಾರ ಮಾಡಲು ತಿಳಿಸಿದನು. ಇವುಗಳಲ್ಲಿ ಅದ್ವಯರೂಪದ ತ್ರ್ಯಂಬಕನ ಸಂಪ್ರದಾಯವೇತ್ರಿಕ ಮತವೆಂದು ಪ್ರಚಾರಕ್ಕೆ ಬಂದಿತು.

**ಯಾದವರ ಶಾಸನಗಳಲ್ಲಿ ಶುದ್ಧಶೈವರು:**

ಯಾದವರ ಕಾಲದ 11 ಶಾಸನಗಳು ಶುದ್ಧಶೈವರ ಕುರಿತಾಗಿ ಹೇಳುತ್ತವೆ. ಅವುಗಳಲ್ಲಿ ಗದಗ ಮತ್ತು ಹಾವೇರಿ ಜಿಲ್ಲೆಯ ತಲಾ ಒಂದು, ಧಾರವಾಡ, ಬೆಳಗಾವಿ ಹಾಗೂ ಕಲಬುರ್ಗಿ ಜಿಲ್ಲೆಗಳ ತಲಾ ಮೂರು ಶಾಸನಗಳು ಈ ವಿಷಯವನ್ನು ಪ್ರಸ್ತಾಪಿಸಿವೆ. ಯಾದವ ಅರಸ ಎರಡನೆಯ ಜೈತುಗಿಯ ಮಗ ಕನ್ನರನು 'ವೇದೋದ್ಧಾರಪರ' ಎಂದು ಖ್ಯಾತನಾಗಿದ್ದನು. ಈತನ ಸಹೋದರ ಮಹಾದೇವನ ಮಗ ಕನ್ನರದೇವ>ಚಿಕ್ಕದೇವ>ಬೀಚದೇವ>ಮಲ್ಲ>ಚಾಮುಂಡ. ಈ ಚಾಮುಂಡನು ಶಿವಾಗಮ ಜ್ಞಾನಿಯಾದ ವಾಗೀಶ್ವರ ಮುನೀಂದ್ರನ ಗುರು. ಇವರ ಕುಲದೇವರು ಪುಲಿಗೆರೆಯ ಸೋಮನಾಥ, ಈ ಚಾಮುಂಡನ ಹೆಂಡತಿ ಲಕ್ಕಾದೇವಿಯು ಅಷ್ಟಾಂಗ ಭಕ್ತಿಯಿಂದ ಶಿವನನ್ನು ಆರಾಧಿಸುತ್ತಿದ್ದಳು. ಚಾಮುಂಡನು ಪುಲಿಗೆರೆಯ ಸುತ್ತ ಅನೇಕ ಅರಮನೆಗಳನ್ನು ಮತ್ತು ದೇವಾಲಯಗಳನ್ನು ಮಾಡಿಸಿದ್ದನು. [ಶಿರೂರ ಬಿ. ವ್ಹಿ: **'ಕರ್ನಾಟಕದ ಪ್ರಾಚೀನ ಶೈವಶಾಖೆಗಳು'– ಯುಜಿಸಿ ಪ್ರಧಾನಯೋಜನೆಗಾಗಿ ಸಾದರ ಪಡಿಸಿದ ವರದಿ, 2008, ಪುಟ–128–29**] ಆದಿಶೆಟ್ಟಿಯ ತಂದೆ ಮಹಾಪ್ರಧಾನ ಮಲ್ಲಿಸೆಟ್ಟಿಯು ಬ್ರಹ್ಮಪುರಿಯನ್ನು ನಿರ್ಮಿಸಿದನು. ಇಲ್ಲಿ ವಾಸಿಸುವ ಬ್ರಾಹ್ಮಣರು ಮಲ್ಲೇಶ್ವರ, ದೇವೇಶ್ವರ ಮತ್ತು



Scanned with OKEN Scanner

ಮಾಧವ ದೇವಾಲಯದ ಆಚಾರ್ಯರಮಠಕ್ಕೆ ಕ್ರಿ.ಶ. 1245 ರಲ್ಲಿದಾನ ನೀಡಿದ್ದರು. [**ಕಲಬುರ್ಗಿಎಂ. ಎಂ. ; ಮಾರ್ಗ. ಸಂ. III. ಪು. 381**]ಎಂದು ಹೇಳುತ್ತದೆ.

**ಗೊರವರು:**

ಶಿವನ ಆರಾಧಕರಲ್ಲಿ ಗುರವಃ ಅಥವಾ ಗೊರವ ಎಂಬ ಜನಾಂಗದವರು ಪ್ರಮುಖರಾಗಿದ್ದಾರೆ. ಗೊರವ ಎಂಬ ಶಬ್ದವು ಈಗ ಹೀನಾಯ ಅರ್ಥವನ್ನೊಳಗೊಂಡಿದ್ದರೂ; ಶಾಸನಗಳು ಈ ಪದವನ್ನು ಗೌರವಯುತವಾಗಿ ಕಂಡಿವೆ. 'ಗುರವಃ' ಎಂಬ ಸಂಸ್ಕೃತ ಬಹುವಚನ ರೂಪವೇ ಕನ್ನಡದಲ್ಲಿ 'ಗೊರವ' ಎಂದಾಗಿದೆ. ಕಾಳಾಮುಖ ಮತ್ತು ಲಕುಲೀಶ-ಪಾಶುಪತದ ಗುರುಗಳನ್ನು 'ಗೊರವ' ಎಂದೇ ಸಂಬೋಧಿಸಲಾಗಿದೆ. [**ಚಿದಾನಂದಮೂರ್ತಿ. ಎಂ. ಎಂ; ಕ. ಶಾ. ಸಾ. ಅ, ಪು. 148**] ಶಾಸನಗಳು ಕಾಳಾಮುಖ ಸಮಯವನ್ನು 'ಏಕ್ಕೋಟಿಸಮಯ'ವೆಂದೂ ಕಾಳಾಮುಖರ ಮಠವನ್ನು 'ಏಕ್ಕೋಟಿಮಠ'ವೆಂದು ಹೇಳಿವೆ. [**ಎಸ್. ಆಯ್. ಆಯ್. ಸಂ. IX. ನಂ. 235; ಇ. ಸಿ. ಸಂ. VIII. ಸೊರಬ-276**]

**ಕರ್ನಾಟಕದ ಶಾಸನಗಳಲ್ಲಿ ಗೊರವರು:**

ರಾಷ್ಟ್ರಕೂಟರ 7, ಕಲ್ಯಾಣಚಾಲುಕ್ಯರ, ಕಳಚೂರಿಯರ, ಯಾದವರ ಮತ್ತು ಹೊಯ್ಸಳರ ತಲಾ ಒಂದೊಂದು ಶಾಸನಗಳು ಗೊರವರ ಕುರಿತಾದ ವಿಷಯವನ್ನು ಹೇಳುತ್ತವೆ. ಯಾದವರ ಕಾಲದ ಚಿರಸ್ತಹಳ್ಳಿಯಲ್ಲಿ ದೊರೆತ ವೀರಗಲ್ಲು ಶಾಸನದ ಕೊನೆಯ ಭಾಗದ ಶಾಪಾಶಯದಲ್ಲಿ"ಈ ಶಾಸನವನ್ನು ಕೆಡಿಸಿದೊಡೆ ವಾರಣಾಸಿಯಂ ಕವಿಲೆಯುಮು ಗೊರವರನ ಪೆಪಿ... "ಎಂದು ಗೊರವನ ಉಲ್ಲೇಖವಿದೆ. [**ಎಸ್. ಆಯ್. ಆಯ್. ಸಂ. IX ಭಾಗ. I. ನಂ. 61**]

ಒಟ್ಟಾರೆ ಯಾದವ ಅರಸರು ಸರ್ವಧರ್ಮಗಳ ಬೆಳವಣಿಗೆಗೆ ಪ್ರೊತ್ಸಾಹ ನೀಡುವುದರೊಂದಿಗೆ ಶೈವಧರ್ಮದ ವಿವಿಧ ಶಾಖೆಗಳನ್ನು ಬೆಳೆಸಲು ಪೂರಕವಾದ ವಾತಾವರಣವನ್ನು ಸೃಷ್ಟಿಸಿದ್ದರೆಂಬುದು ಶಾಸನಗಳಿಂದ ಸ್ಪಷ್ಟ ಅಲ್ಲದೇ ಶೈವಧರ್ಮದ ಅಭ್ಯುದಯಕ್ಕಾಗಿ

ಕರ್ನಾಟಕದ ಶಾಸನೋಕ್ತ ಅರಸರು ನೀಡಿದ ಯಾದವರು-14 ಯಾದವರ 3 ಶಾಸನಗಳು ಸಾಮಂತರ ರಾಣಿಯರು ನೀಡಿದ ದಾನಗಳನ್ನು ಉಲ್ಲೇಖಿಸಿವೆ. ಯಾದವರ-7 ಶಾಸನಗಳು ಅಧಿಕಾರಿಗಳ ಮಡದಿಯರು ನೀಡಿದ ದಾನಗಳ ಬಗ್ಗೆ ಹೇಳುತ್ತವೆ. ಯಾದವರ-4 ಶಾಸನಗಳು ಸಾಮಾನ್ಯ ಮಹಿಳೆಯರ ದಾನಗಳನ್ನು, 16 ಶಾಸನವಗಳು ಮಹಾಜನರು ನೀಡಿದ ದಾನಗಳನ್ನು, 9 ಶಾಸನಗಳು ಮುನಿಗಳು ನೀಡಿದ ದಾನಗಳ ಬಗ್ಗೆ ಹೇಳುತ್ತವೆ. 14 ಶಾಸನಗಳಲ್ಲಿ ಮಹಾಮಂಡಳೇಶ್ವರರು ಮತ್ತು ಸಾಮಂತರು ನೀಡಿದ ದಾನಗಳ ಬಗ್ಗೆ ಉಲ್ಲೆಖವಿದೆ.

24 ಶಾಸನಗಳು ಮಹಾಪ್ರಧಾನ ದಂಡನಾಯಕರು ನೀಡಿದ ದಾನಗಳ ಬಗ್ಗೆ 2 ಶಾಸನಗಳಲ್ಲಿ ಪೆರ್ಗಡೆಗಳು ನೀಡಿದ ದಾನಗಳ ಉಲ್ಲೇಖವಿದೆ. ಇತರೆ ಅಧಿಕಾರಿಗಳು ನೀಡಿದ ದಾನಗಳ ಕುರಿತು 36 ಶಾಸನಗಳು ತಿಳಿಸುತ್ತವೆ.

ಈ ಮೇಲಿನ ಶಾಸನಗಳಲ್ಲಿ 156 ಭೂದಾನ ಮಾಡಿರುವುದನ್ನು ಹೇಳುತ್ತವೆ. 1 ಶಾಸನದಲ್ಲಿ ಗ್ರಾಮದಾನ ನೀಡಿದ್ದನ್ನು 33 ಶಾಸನಗಳು ಎಣ್ಣೆ/ಗಾಣಗಳ ದಾನ ಮಾಡಿರುವುದನ್ನು ದಾಖಲಿಸಿದರೆ, 31 ಮನೆ/ನಿವೇಶನಗಳನ್ನು ದಾನವೆಂದು ಕೊಟ್ಟಿದ್ದನ್ನು ಹೇಳಿವೆ. 30 ಶಾಸನಗಳು ಹಣ ದಾನವಾಗಿ ನೀಡಿದ್ದನ್ನು ಉಲ್ಲೇಖಿಸಿವೆ. ಮುಂದುವರೆದು 27 ಶಾಸನಗಳಲ್ಲಿ ತೆರಿಗೆ/ಆದಾಯವನ್ನು ದಾನವಾಗಿ ನೀಡಿದ್ದನ್ನು ಪರಿಚಯಿಸಿವೆ. 19 ಶಾಸನಗಳಲ್ಲಿ ಇತರೆ ವಸ್ತುಗಳು, ವೃತ್ತಿಗಳು, ಎಲೆ, ಅಡಿಕೆ, ಭತ್ತ, ಮುಂತಾದವುಗಳನ್ನು ದಾನವಾಗಿ ನೀಡಿದ್ದನ್ನು ಹೇಳುತ್ತವೆ.

ಒಟ್ಟಾರೆ ಸಮಾಜದಲ್ಲಿ ಅತ್ಯುನ್ನತ ಮಟ್ಟದಲ್ಲಿರುವ ಅರಸು ಮನೆತನದವರನ್ನು ಮೊದಲ್ಗೊಂಡು ಸಾಮಾನ್ಯ ವರ್ಗದವರು ಸಹ ಭೂದಾನ ಮಾಡಿರುವುದನ್ನು ಗಮನಿಸಿದಾಗ ಭೂದಾನ ಅತ್ಯಂತ ಸಾಮಾನ್ಯವಾಗಿತ್ತು ಎಂಬುದು ತಿಳಿದು ಬರುತ್ತದೆ. ಒಂದು ವೇಳೆ ಭೂಮಿ ಇಲ್ಲದಿದ್ದರೆ ಮತ್ತೊಬ್ಬರಿಂದ ಭೂಮಿಯನ್ನು ಕೊಂಡುಕೊಂಡು ದಾನ ಮಾಡಿರುವುದನ್ನು ಶಾಸನಗಳು ತಿಳಿಸುತ್ತವೆ. ಇಲ್ಲಿ ಅರಸು ಮನೆತನದವರಿಗಿಂತ ಮಾಂಡಳಿಕರು, ದಂಡನಾಯಕರು ಹೆಚ್ಚಾಗಿ ಗ್ರಾಮದಾನ ನೀಡಿದ್ದನ್ನು ದಾಖಲಿಸಿವೆ.

ತೆರಿಗೆ ಅಧಿಕಾರಿಗಳು, ವ್ಯಾಪಾರಿ ಸಂಘದವರು, ವ್ಯಾಪಾರಿಗಳು ತಮ್ಮ ಆದಾಯದ ಲಾಭವನ್ನು ದಾನವಾಗಿ ನೀಡಿರುವುದು ಈ ದಾನಗಳು ಅವರು ಭರಿಸುತ್ತಿದ್ದ ತೆರಿಗೆಯ ವಿನಾಯತಿಗಾಗಿ ನೀಡಿರಬಹುದು. ಅಧಿಕಾರಿಗಳು ಮನೆ,



Scanned with OKEN Scanner

ನಿವೇಶನವನ್ನು ನೀಡಿರುವುದರ ಕುರಿತಾಗಿ ತಿಳಿಸುತ್ತವೆ. ಈ ದಾನಗಳನ್ನು ಸಂಕ್ರಮಣ, ಸೂರ್ಯಗ್ರಹಣ, ಚಂದ್ರಗ್ರಹಣ, ಶಿವರಾತ್ರಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಮತ್ತು ವಿವಿಧ ಉದ್ದೇಶಗಳ ಹಿನ್ನೆಲೆಯಲ್ಲಿ ನೀಡಿರುವುದನ್ನು ಗುರುತಿಸಲಾಗಿದೆ.

ಶೈವಧರ್ಮಕ್ಕೆ ದಾನವನ್ನು ನೀಡುವ ಸಂದರ್ಭದಲ್ಲಿ ವಿಶೇಷವಾಗಿ ಗಮನಿಸಿದಾಗ ಮಹಾಜನರು ಮತ್ತು ಮುನಿಗಳು, ಸ್ಥಾನಪತಿಗಳೂ ಸಹ ದಾನ ಕೊಟಿರುವುದನ್ನು ಗಮನಿಸಬಹುದಾಗಿದೆ. ಯಾದವರ, 16 ಶಾಸನಗಳು ಮಹಾಜನರು ದಾನ ನೀಡಿದ್ದನ್ನು ಉಲ್ಲೇಖಿಸಿವೆ. ಹೀಗಾಗಿ ಮಹಾಜನರೂ ಸಹ ಶೈವಧರ್ಮಧ ಬೆಳವಣಿಗೆಗೆ ಪ್ರೋತ್ಸಾಹಿಸಿರುವುದನ್ನು ಪ್ರಸ್ತುತ ಲೇಖನದ ಮೂಲಕ ಕಂಡುಕೊಳ್ಳಲಾಗಿದೆ. ಯಾದವರ 9 ಶಾಸನಗಳಲ್ಲಿ ಶೈವ ಮುನಿಗಳು ದಾನ ನೀಡಿರುವುದನ್ನು ನಮ್ಮ ಅಧ್ಯಯನದಲ್ಲಿ ಗಮನಿಸಿದ್ದೇವೆ. ಯಾದವರ ಕಾಲದ 10 ಶಾಸನಗಳಲ್ಲಿ ರಾಜಗುರುಗಳನ್ನು ಕುರಿತು ಹೇಳಿರುವುದು.

ಹೀಗೆ ಅರಸರು, ರಾಣಿಯರು, ಮಾಂಡಲೀಕರು, ಸಾಮಂತರು, ವ್ಯಾಪಾರಿ ಸಂಘಗಳು, ವ್ಯಾಪಾರಿಗಳು, ಮಹಾಜನರು, ಸಾಮಾನ್ಯ ವರ್ಗದವರು ದೇವಾಲಯಗಳನ್ನು ನಿರ್ಮಿಸಿರುವುದಲ್ಲದೇ ದೇವಾಲಯದ ವಿವಿಧ ಕಾರ್ಯಗಳಿಗೆಂದು ಭೂಮಿ, ಹಣ, ಗಾಣ, ಗ್ರಾಮ, ನಿವೇಶನ, ಮನೆಗಳನ್ನು ದಾನವಾಗಿ ನೀಡಿದ್ದರೆಂಬುದು ಶಾಸನಗಳಿಂದ ತಿಳಿಯುತ್ತದೆ. ಇದರಿಂದ ಯಾದವರ ಕಾಲದಲ್ಲಿ ಎಲ್ಲಾ ಧರ್ಮಗಳಿಗಿಂತ ಶೈವಧರ್ಮವು ಹೆಚ್ಚು ಬೆಳವಣಿಗೆಯನ್ನು ಕಂಡುಕೊಂಡಿತ್ತೆಂದು ಹೇಳಬಹುದು.

**ಆಕರ ಗ್ರಂಥಗಳು :**


- ದೇವರಕೊಂಡಾರೆಡ್ಡಿ (ಸಂ) ಮತ್ತು ಇತರರು ಸಂಪಾದಿಸಿದ ಕನ್ನಡ ವಿಶ್ವವಿದ್ಯಾಲಯ, ಹಂಪಿ ಶಾಸನ ಸಂಪುಟಗಳು
- ಎಸ್. ಎಸ್. ಆಯ್. ಸಂಪುಟಗಳು 1 ರಿಂದ 20
- ಎಫಿಗ್ರಾಫಿಕಾ ಕರ್ನಾಟಿಕ ಸಂಪುಟಗಳು 1 ರಿಂದ 24
- ಕರ್ನಾಟಕ ರಾಜ್ಯ ಗ್ಯಾಜೇಟೀಯರ್‌ಗಳು–ವಿಜಯಪುರ, ಗುಲಬರ್ಗಾ, ಮಂಡ್ಯ, ಹಾಸನ, ಮೈಸೂರು, ತುಮಕೂರು ಜಿಲ್ಲೆ
- ಈರಣ್ಣ ಕೆ. ಪಿ., 2014 : ಕಾಳಾಮುಖ, ಮನು ಸಾಹಿತ್ಯ ಪ್ರಕಾಶನ, ಧಾರವಾಡ.
- ಈರಣ್ಣ ಕೆ. ಪಿ., 2012 : ಕಾಳಾಮುಖರ ಕುರಿತಾಗಿರುವ ಅಧ್ಯಯನಗಳು, ಮನು ಸಾಹಿತ್ಯ ಪ್ರಕಾಶನ, ಧಾರವಾಡ.
- ಕಲಬುರ್ಗಿ ಎಂ. ಎಂ., 1974 : ಕನ್ನಡ ಶಾಸನ ಸಂಪದ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ
- ಕಲಬುರ್ಗಿ ಎಂ. ಎಂ., 2005 : ಮಾರ್ಗ ಸಂಪುಟಗಳು(1–8) ಸ್ವಪ್ನಬುಕ್ ಹೌಸ, ಬೆಂಗಳೂರು.
- ನಂದಿಮಠ ಎಸ್. ಸಿ., 1975 : ಕರ್ನಾಟಕದ ಧರ್ಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಚಿದಾನಂದಮೂರ್ತಿ ಎಂ., 1966 : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈ. ವಿ. ವಿ. ಮೈಸೂರು.
- ಬಡಿಗೇರ ವಾಸುದೇವ, 2020 : ದೇವರ ದಾಸಿಮಯ್ಯ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ನರಸಿಂಹಮೂರ್ತಿ ಎಂ. ವಿ., 2010 : ಕರ್ನಾಟಕದ ಸೇವುಣರ ಇತಿಹಾಸ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.
- ಶಿರೂರ ಬಿ. ವ್ಹಿ., 2008 : ಕರ್ನಾಟಕದ ಪ್ರಾಚೀನ ಶೈವಶಾಖೆಗಳು – ಯುಜಿಸಿ ಪ್ರಧಾನಯೋಜನೆಗಾಗಿ ಸಾದರ ಪಡಿಸಿದ ವರದಿ.
- ನೀಲಕಂಠಸ್ವಾಮಿ, 2007 : ಬಿಜಾಪುರಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಆರಂಭದಿಂದ ಸೇವುಣರ ಕಾಲದವರೆಗೆ); ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ
- ದಾಸ್ತೋವಸ್ಕಿ ಎಸ್. ಜಿ., 1988 : ದಕ್ಯಾನನ್ ಆಫ್ ದಿ ಶೈವಾಗಮ ಆ್ಯಂಡ್ ಕುಬ್ಜಿಕ ತಂತ್ರಾಸ್‌ಆಫ್ ದಿ ಕೌಳ ಟ್ರೆಡಿಷನ್.
- Chitgopekar Nilima, 1998 : Encountering Sivaism The Deity the Milieu the Entourage; Munshiram Manoharalal, Delhi.




Scanned with OKEN Scanner